**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 06 (237) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.09.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮದಡಿ ರಾಜ್ಯದ ಯಾವ ಯಾವ ನಗರಗಳನ್ನು ಗುರುತಿಸಲಾಗಿದೆ; ಇದಕ್ಕಾಗಿ ಹಾಕಿಕೊಂಡಿರುವ ಗುರಿಗಳೇನು? | ಕೇಂದ್ರ ಸರ್ಕಾರದ ರಾಷ್ಟ್ರೀಯ ಸ್ವಚ್ಚ ಗಾಳಿ ಕಾರ್ಯಕ್ರಮದಡಿ ರಾಜ್ಯದ ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ-ಧಾರವಾಡ ಹಾಗೂ ಕಲಬುರಗಿ ನಗರಗಳನ್ನು ಗುರುತಿಸಲಾಗಿದೆ. ಸದರಿ ಕಾರ್ಯಕ್ರಮದಡಿ 2019ರಿಂದ 2024ರ ಅವಧಿಯಲ್ಲಿ ಮೇಲಿನ ನಾಲ್ಕು ನಗರಗಳಲ್ಲಿ 2019ರಲ್ಲಿ ಇದ್ದ ಧೂಳಿನ ಪ್ರಮಾಣವನ್ನು ಶೇಕಡ 20 ರಿಂದ 30ರಷ್ಟು ತಗ್ಗಿಸುವ ಗುರಿ ಹೊಂದಿದೆ. |
| (ಆ) | 2024 ವೇಳೆಗೆ ನಿಗದಿಪಡಿಸಿಕೊಂಡಿರುವ ಗುರಿಗಳನ್ನು ಸಾಧಿಸಲು ಸರ್ಕಾರ ಸಿದ್ಧಪಡಿಸಿದ ನಿರ್ಧಿಷ್ಟ ಕ್ರಿಯಾಯೋಜನೆಯ ವಿವರಗಳೇನು; | ಈ ಕಾರ್ಯಕ್ರಮದಡಿ ನಿಗದಿಪಡಿಸಿರುವ ಗುರಿ ಸಾಧಿಸಲು ಬೆಂಗಳೂರು ಮಹಾನಗರಕ್ಕೆ ಸಂಬಂಧಿಸಿದಂತೆ 44 ಅಂಶಗಳ ಕಾರ್ಯಯೋಜನೆ ಹಾಗೂ ಉಳಿದ 3 ನಗರಗಳಿಗೆ 27 ಅಂಶಗಳ ಕಾರ್ಯಯೋಜನೆಯನ್ನು ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟ ಪ್ರಮುಖ ಇಲಾಖೆಗಳಾದ ಸಂಬಂಧಪಟ್ಟ ಸ್ಥಳಿಯ ಸಂಸ್ಥೆಗಳು, ಸಾರಿಗೆ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳನ್ನು ಒಳಗೊಂಡು ಕಾರ್ಯಯೋಜನೆ ಸಿದ್ದಪಡಿಸಿದ್ದು ಇವುಗಳನ್ನು ಇಲಾಖೆಗಳು ಅನುಷ್ಠಾನಗೊಳಿಸುತ್ತಿವೆ.<br><br>ಇಲಾಖಾವಾರು ಅನುಷ್ಠಾನಗೊಳಿಸಬೇಕಾಗಿರುವ ಕಾರ್ಯಯೋಜನೆಯ ಅಂಶಗಳು ಕೆಳಕಂಡಂತಿವೆ: |

| ಇಲಾಖೆಗಳು | ಬೆಂಗಳೂರು | ಹುಬ್ಬಳ್ಳಿ-ಧಾರವಾಡ | ಕಲಬುರ್ಗಿ | ದಾವಣಗೆರೆ |
|---|---|---|---|---|
| ಬಿ.ಬಿ.ಎಂ.ಪಿ/ ಸ್ಥಳೀಯ ಸಂಸ್ಥೆಗಳು | 16 | 11 | 11 | 11 |
| ಸಾರಿಗೆ ಮತ್ತು ರಸ್ತೆ ಸುರಕ್ಷತೆ | 8 | 3 | 4 | 2 |
| ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | 5 | 5 | 5 | 6 |
| ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 3 | 5 | 4 | 5 |

| | | | | | | |
|---|---|---|---|---|---|---|
| | | ಪೊಲೀಸ್ ಇಲಾಖೆ (ಸಂಚಾರ) | 5 | 1 | 1 | 1 |
| | | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ | 1 | 2 (NWRTC) | 2 (NEKRTC) | 2 |
| | | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ | 4 | - | - | - |
| | | ಬೆಂಗಳೂರು ಮೆಟ್ರೋ ರೈಲು | 3 | - | - | - |
| | | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 3 | - | - | - |
| | | ಅರಣ್ಯ ಇಲಾಖೆ | - | - | - | 2 |
| | | ಬೆಂಗಳೂರು ವಿದ್ಯುಚ್ಛಕ್ತಿ ಕಂಪನಿ ನಿಯಮಿತ | 1 | - | - | - |
| | | ಸ್ಮಾರ್ಟ್ ಸಿಟಿ | - | - | 1 | - |
| (ಇ) | ಈ ಉದ್ದೇಶಕ್ಕಾಗಿ ಕೇಂದ್ರ ಮತ್ತು ರಾಜ್ಯಗಳು ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಹಣವೆಷ್ಟು? | ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮದಡಿ ಕೇಂದ್ರ ಸರ್ಕಾರವು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮುಖೇನ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ 2019 ಹಾಗೂ 2021ರಲ್ಲಿ ಒಟ್ಟು ರೂ.7.82 ಕೋಟಿ ಅನುದಾನ ಬಿಡುಗಡೆ ಮಾಡಿದ್ದು ದಿನಾಂಕ:20-7-2021 ರವರೆಗೆ ರೂ.2,68,61,600/-ಗಳನ್ನು ಖರ್ಚು ಮಾಡಲಾಗಿದೆ ಹಾಗೂ ಬಿ.ಬಿ.ಎಂ.ಪಿಗೆ ವಾಟರ್ ಸ್ಪ್ರಿಂಕ್ಲರ್ಸ್, ಗ್ರೀನಿಂಗ್ ಹಾಗೂ ಪೇವಿಂಗ್ ಕೆಲಸಗಳಿಗಾಗಿ 2019-20ನೇ ಸಾಲಿಗೆ ರೂ.2.22 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ರೂ.1.80 ಕೋಟಿ ಖರ್ಚು ಮಾಡಲಾಗಿದೆ.<br>ಮುಂದುವರೆದು, 2020-21ನೇ ಸಾಲಿಗೆ ಬಿ.ಬಿ.ಎಂ.ಪಿಗೆ 15ನೇ ಹಣಕಾಸು ಆಯೋಗದಿಂದ ರೂ.279 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. | | | | |

**ಸಂಖ್ಯೆ: ಅಪಜೀ 197 ಇಪಿಬಿ 2021**

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು.

ಗಾರ್ ಶ್ರೀಂತ (1)

**ಕರ್ನಾಟಕ ವಿಧಾನ ಪರಿಷತ್**

**ನೂರ ನಲವತ್ತನೇ ಅಧಿವೇಶನ**

**ಗುರುವಾರ, ದಿನಾಂಕ: 16ನೇ ಸೆಪ್ಟೆಂಬರ್, 2021**

**ವಿಷಯ: ರಾಷ್ಟ್ರೀಯ ಸ್ವಚ್ಛಗಾಳಿ ಕಾರ್ಯಕ್ರಮದಡಿ ರಾಜ್ಯದ ನಗರಗಳನ್ನು ಗುರುತಿಸಿ ನಿರ್ದಿಷ್ಟ ಕ್ರಿಯಾ ಯೋಜನೆಯನ್ನು ರೂಪಿಸುವ ಕುರಿತು ದಿನಾಂಕ: 13.09.2021 ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 06(237) ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು ಶ್ರೀ.ಕೆ.ಸಿ.ಕೊಂಡಯ್ಯ ಅವರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಇಲಾಖಾ ಉತ್ತರ.**

❖❖❖❖❖

**(ಅ) ಹಿನ್ನಲೆ:**

ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ರಾಷ್ಟ್ರೀಯ ವಾಯು ಗುಣಮಟ್ಟ ಮಾಪನ ಕಾರ್ಯಕ್ರಮದ ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕರಾಮಾನಿಮಂ) ಯು ರಾಜ್ಯದ ಸುತ್ತಮುತ್ತಲ ವಾಯು ಗುಣಮಟ್ಟವನ್ನು 39 ಮಾನವಚಾಲಿತ ಉಪಕರಣ ಮತ್ತು 31 ನಿರಂತರ ಮಾಪನ ಉಪಕರಣಗಳ ಮೂಲಕ ಮಾಪನ ಮಾಡುತ್ತಿದೆ ($PM_{10}$, $PM_{2.5}$, $SO_2$, $NO_2$, ಅಮೋನಿಯಾ, ಸೀಸ ಮತ್ತು ಕಾರ್ಬೋನ್ ಮೋನಾಕ್ಸೈಡ್). ಮಾಪನದ ವರದಿಗಳನ್ನು ಮಾಸಿಕವಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು 2011-15ರ ಅವಧಿಯ ಮಾಪನ ವರದಿಗಳನ್ನು ಆಧರಿಸಿ, ದೇಶದಾದ್ಯಂತ 132 ನಗರಗಳು ನಿಗದಿತ ಮಾನದಂಡಗಳನ್ನು (ಧೂಳಿನ ಕಣಗಳು) ಸಾಧಿಸದ ಕಾರಣ ವಾಯು ಮಾಲಿನ್ಯ ಮಿತಿ ಮೀರಿದ ನಗರಗಳೆಂದು ಗುರುತಿಸಿದೆ. ಕರ್ನಾಟಕದಲ್ಲಿನ 4 ನಗರಗಳು ಅಂದರೆ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಕಲ್ಬುರ್ಗಿ, ದಾವಣಗೆರೆ ನಗರಗಳು ಈ ನಗರಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿವೆ.

ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮವನ್ನು 2019 ರಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯತಂತ್ರವಾಗಿ ದೇಶದ ನಗರ ಮತ್ತು ಪ್ರಾದೇಶಿಕ ಮಟ್ಟದಲ್ಲಿ ವಾಯುಮಾಲಿನ್ಯ ಮಟ್ಟವನ್ನು ತಗ್ಗಿಸಲು ಉದ್ದೇಶ ಹೊಂದಿದ್ದು, ವಾಯು ಗುಣಮಟ್ಟ ಸಾಧಿಸಲಾಗದ ನಗರಗಳಲ್ಲಿ ಧೂಳಿನ ಕಣಗಳ ಸಾಂದ್ರತೆಯನ್ನು 2019 ರಲ್ಲಿ ಇದ್ದ ಧೂಳಿನ ಪ್ರಮಾಣವನ್ನು ಮೂಲದಲ್ಲಿಟ್ಟು, ಶೇಕಡ 20 ರಿಂದ ಶೇಕಡ 30 ರಷ್ಟು 2019 ರಿಂದ 2024 ರ ವರೆವಿಗೆ ತಗ್ಗಿಸುವ ಗುರಿ ಹೊಂದಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಿ ಬೆಂಗಳೂರಿಗೆ 44 ಅಂಶಗಳ ಕ್ರಿಯಾ ಯೋಜನೆ ಮತ್ತು ಹುಬ್ಬಳ್ಳಿ-ಧಾರವಾಡ, ಕಲ್ಬುರ್ಗಿ, ದಾವಣಗೆರೆಗೆ 27 ಅಂಶಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ. ರಾಜ್ಯ ಮಟ್ಟದಲ್ಲಿ ವಾಯು ಗುಣಮಟ್ಟ ಮಾನಿಟರಿಂಗ್ ಸಮಿತಿ ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದಿದೆ.

ಸೂಚನೆ: ಈ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ ಇತರೆ ನಗರಗಳನ್ನು ಭಾರತ ಸರ್ಕಾರವು ಸೇರ್ಪಡಿಸಿಲ್ಲ.

(ಆ) ವಾಯುನಲ್ಲಿ $PM_{2.5}$ ಮತ್ತು $PM_{10}$ ಕಣಗಳನ್ನು ತಗ್ಗಿಸುವುದು ಮುಖ್ಯವಾಗಿದೆ. ಈ ಕಣಗಳು ತುಂಬಾ ಚಿಕ್ಕದಾಗಿದೆ ಎಂದು ಗಮನಿಸಲಾಗಿದ್ದು, ಇವುಗಳು ನೇರವಾಗಿ ಮಾನವನ ಶ್ವಾಸಕೋಶದ ಮೂಲಕ ನಮ್ಮ ರಕ್ತನಾಳಗಳನ್ನು ಸೇರಬಹುದು.

ನಗರಗಳಲ್ಲಿ ಧೂಳಿನ ಕಣಗಳ ಸಾಂದ್ರತೆಯನ್ನು ಹೆಚ್ಚಿಸಲು ಕಾರಣವಾಗುವ ಮುಖ್ಯ ಚಟುವಟಿಕೆಗಳು ಕೆಳಕಂಡಂತಿವೆ:

1. ಇಂಧನ ವಸ್ತುಗಳ ಸುಡುವಿಕೆ (ಮರ, ಎಲೆ-ಕಸ, ಕಲ್ಲಿದ್ದಲು ಇತ್ಯಾದಿ)
2. ನಗರಗಳಲ್ಲಿ ಎರಡು ಸ್ಟ್ರೋಕ್ ವಾಹನಗಳ ಬಳಕೆ.
3. ನಗರದಲ್ಲಿ ಚಾಲನೆಯಲ್ಲಿರುವ ಹೆಚ್ಚು ಮಾಲಿನ್ಯಕಾರಕ ವಾಹನಗಳು.
4. ಸಂಚಾರ ದಟ್ಟಣೆ ಮತ್ತು ರಸ್ತೆ ಧೂಳು.
5. ದಟ್ಟಣೆಗೆ ಕಾರಣವಾಗುವ ರಸ್ತೆಯಲ್ಲಿ ಗೊತ್ತುಪಡಿಸದ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸದಿರುವುದು.
6. ಯಾಂತ್ರಿಕ ಗುಡಿಸುವ ವಾಹನಗಳನ್ನು ನಿಯೋಜಿಸುವ ಮೂಲಕ ನಿಯಮಿತವಾಗಿ ಪ್ರಮುಖ ರಸ್ತೆಗಳಿಂದ ಧೂಳು ಮತ್ತು ಹೂಳು ತೆಗೆಯದಿರುವುದು.
7. ನಗರಗಳಲ್ಲಿ ವಾಹನಗಳಿಗೆ ಸಾಕಷ್ಟು ಪಾರ್ಕಿಂಗ್ ಸೌಲಭ್ಯಗಳಿಲ್ಲದಿರುವುದು.
8. ಅಸಮರ್ಪಕ ಘನ ತ್ಯಾಜ್ಯ ಮತ್ತು ಕಟ್ಟಡ ನಿರ್ಮಾಣ/ಉರುಳಿಸುವಿಕೆಯ ತ್ಯಾಜ್ಯ ನಿರ್ವಹಣೆ ಅಭ್ಯಾಸಗಳು.
9. ಇಂಧನದ ಕಲಬೆರಕೆ.

(ಇ) ಕಾರ್ಯಕ್ರಮಕ್ಕೆ ಧನಸಹಾಯ::

1. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಬಿಡುಗಡೆ ಮಾಡಿದ ಮೊತ್ತ:

ಕೇಂದ್ರದ 15ನೇ ಹಣಕಾಸು ಆಯೋಗವು 15 ರಾಜ್ಯಗಳಲ್ಲಿ ದಶಲಕ್ಷ ಜನ ಸಂಖ್ಯೆ ಮೀರಿದ 42 ನಗರಗಳಲ್ಲಿ ವಾಯು ಗುಣಮಟ್ಟವನ್ನು ಮೂಲಭೂತ ಸೌಕರ್ಯ ಉನ್ನತೀಕರಿಸುವ ಮುಖೇನ ಸುಧಾರಿಸಲು ಅನುದಾನ ನೀಡುತ್ತಿದೆ. ಕರ್ನಾಟಕದ ಬೆಂಗಳೂರು ಅಂತಹ ನಗರಗಳಲ್ಲಿ ಒಂದಾಗಿದೆ.

ಮೇಲಿನ ದಶಲಕ್ಷ ಸಂಖ್ಯೆಯುಳ್ಳ ನಗರಗಳನ್ನು ಹೊರತುಪಡಿಸಿ ಇತರೆ ನಗರಗಳಿಗೆ ಅಲ್ಪ ಪ್ರಮಾಣದ ಹಣವನ್ನು ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮದ ಅಡಿ ಆಯಾ ನಗರಕ್ಕೆ ನಿಗಧಿಪಡಿಸಿರುವ ಕಾರ್ಯಯೋಜನೆ ಅನುಷ್ಠಾನಗೊಳಿಸಲು ಅನುದಾನ ನೀಡುತ್ತಿದೆ.

ನಗರ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳಂತಹ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು/ಏಜೆನ್ಸಿಗಳ ಯೋಜನೆಗಳು ಮತ್ತು ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯಿಂದ ಹಣ ಸಹ ಈ ಕಾರ್ಯಕ್ರಮದ ಅನುಷ್ಠಾನಗೊಳಿಸಲು ವಿನಿಯೋಗಿಸಬಹುದಾಗಿದೆ.

ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳು

| | | |
|---|---|---|
| ಅ) | ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿ (NCAP) ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಬಿಡುಗಡೆ ಮಾಡಿರುವ ಅನುದಾನ ವಿವರಗಳು: (ಕೋಟಿ ರೂ.ಗಳಲ್ಲಿ) | |
| | 1) NCAP 1ನೇ ಕಂತು: ಬಿಡುಗಡೆ ದಿನಾಂಕ :9-9-2019 | ₹ 6,30,00,000/- |
| | 2) NCAP 2ನೇ ಕಂತು: ಬಿಡುಗಡೆ ದಿನಾಂಕ:31-3-2021 | ₹ 1,52,00,000/- |
| | ಒಟ್ಟು ಮೊತ್ತ | ₹ 7,82,00,000/- |

| | | |
|---|---|---|
| ಆ) | ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿ(NCAP) ಬಿಡುಗಡೆ ಮಾಡಲಾದ ಅನುದಾನದ ಖರ್ಚಿನ ವಿವರಗಳು (ರಾಜ್ಯದ ನಾಲ್ಕು NAC ನಗರಗಳಿಗೆ) | |
| | 1) 6 ವಾಟರ್ ಸ್ಪ್ರಿಂಕ್ಲರ್ಸ್ ಖರೀದಿಗಾಗಿ, ಗ್ರೀನಿಂಗ್ ಹಾಗೂ ಪೇವಿಂಗ್ ಕೆಲಸಗಳಿಗಾಗಿ (ಅನುದಾನವನ್ನು ಬಿಬಿಎಂಪಿಗೆ ಬಿಡುಗಡೆ ಮಾಡಲಾಗಿದೆ.) | ₹ 2,22,00,000/- |
| | 2) ಪರಿಸರ ಸ್ನೇಹಿ ಗಣೇಶ ಹಬ್ಬದ ಪ್ರಯುಕ್ತ ರೇಡಿಯೋ ಹಾಗೂ ಮೊಬೈಲ್ ಮೂಲಕ ವಾಯ್ಸ್ ಮೆಸೇಜ್ಸ್ ಕಳುಹಿಸಿರುವುದಕ್ಕಾಗಿ | ₹95,000/- |

| | | |
|---|---|---|
| | 3) ಮೊಬೈಲ್ ಎನ್ಫೋರ್ಸ್ಮೆಂಟ್ ವಾಹನಗಳು ಖರೀದಿಗಾಗಿ | ₹30,00,000/- |
| | 4) ಎರಡು $PM_{10}$ & $PM_{2.5}$ ಮಾನವ ಚಾಲಿತ (NAMP) ಉಪಕರಣಗಳನ್ನು ಖರೀದಿಗಾಗಿ(ಕಲಬುರ್ಗಿ ನಗರಕ್ಕೆ) | ₹7,83,300/- |
| | 5) ಒಂದು $PM_{10}$ & $PM_{2.5}$ ಮಾನವ ಚಾಲಿತ (NAMP) ಉಪಕರಣಗಳನ್ನು ಖರೀದಿಗಾಗಿ(ಹುಬ್ಬಳ್ಳಿ-ಧಾರವಾಡ ನಗರಕ್ಕೆ) | ₹3,91,650/- |
| | 6) ಒಂದು $PM_{10}$ & $PM_{2.5}$ ಮಾನವ ಚಾಲಿತ (NAMP) ಉಪಕರಣಗಳನ್ನು ಖರೀದಿಗಾಗಿ(ದಾವಣಗೆರೆ ನಗರಕ್ಕೆ) | ₹3,91,650/- |
| | ಒಟ್ಟು ಮೊತ್ತ | ₹ 2,68,61,600/- |

| | | |
|---|---|---|
| | ಬಾಕಿ NCAP ಅನುದಾನ | ₹ 5,12,38,400/-* |

* 8 ನಿರಂತರ ವಾಯು ಗುಣಮಟ್ಟ ಮಾಪನ ಉಪಕರಣಗಳನ್ನು ಖರೀದಿಸಲು ಆದೇಶ ನೀಡಲಾಗಿದೆ.

2. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, 15ನೇ ಹಣಕಾಸು ಆಯೋಗದ ಅಡಿಯಲ್ಲಿ ರೂ.279 ಕೋಟಿಗಳನ್ನು ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ಮೂಲಕ ವಾಯು ಮಾಲಿನ್ಯವನ್ನು ತಗ್ಗಿಸುವ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಲು ಬಿಡುಗಡೆ ಮಾಡಿದೆ.

**(ಈ) ಕ್ರಿಯಾ ಬಿಂದುಗಳು:**

ಕಾರ್ಯ ಯೋಜನೆಯಲ್ಲಿ ನಿಗದಿಪಡಿಸಲಾದ ಕ್ರಿಯಾ ಬಿಂದುಗಳು ನಿಭಾಯಿಸಬೇಕಾದ ನಿರ್ದಿಷ್ಟ ಸಮಸ್ಯೆಗಳಿಗೆ ಸಂಬಂಧಿಸಿವೆ. ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕ್ರಿಯಾ ಬಿಂದುಗಳ ಉದಾಹರಣೆ ಕೆಳಕಂಡಂತಿವೆ:

| ಕ್ರ. ಸಂ | ಕಾರ್ಯ ಯೋಜನೆಯ ಬಿಂದುಗಳು | ಬಿ.ಬಿ.ಎಂ.ಪಿ | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ | ದಾವಣಗೆರೆ ಮಹಾನಗರ ಪಾಲಿಕೆ | ಕಲಬುರ್ಗಿ ಮಹಾನಗರ ಪಾಲಿಕೆ | ಸಾರಿಗೆ ಇಲಾಖೆ | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ | ಪೊಲೀಸ್ ಇಲಾಖೆ | ಕೆ.ಎಸ್.ಆರ್.ಟಿ.ಸಿ/ ಬಿ.ಎಂ.ಟಿ.ಸಿ | ಅರಣ್ಯ ಇಲಾಖೆ |
|---|---|---|---|---|---|---|---|---|---|---|---|
| 1 | ಸೋರ್ಸ್ ಅಪೋರ್ಷಮೆಂಟ್ ಅಧ್ಯಯನ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ | ಇಲ್ಲ |
| 2 | ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಕೇಂದ್ರಗಳು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ | ಇಲ್ಲ |
| 3 | ಸಂಚಾರ ದಟ್ಟಣೆ ನಿಯಂತ್ರಣ | ಹೌದು | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ |
| 4 | ಲೇನ್ ಶಿಸ್ತನ್ನು ಜಾರಿಗೊಳಿಸುವುದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ |
| 5 | ನಾನ್‌ಪಾರ್ಕಿಂಗ್ ಸ್ಥಳಗಳಲ್ಲಿ ವಾಹನ ನಿಲ್ಲಿಸುವುದರಿಂದ ದಂಡ ವಿಧಿಸುವುದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ |

| | | | | | | | | | | | |
|---|---|---|---|---|---|---|---|---|---|---|---|
| 6 | ರಸ್ತೆ ಮೂಲ ಸೌಕರ್ಯ ಅಭಿವೃದ್ಧಿಪಡಿಸುವುದು | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| 7 | ನಗರದಲ್ಲಿ ಕಟ್ಟಡ ನಿರ್ಮಾಣ ಮತ್ತು ಉರುಳಿಸುವಿಕೆ ತ್ಯಾಜ್ಯವನ್ನು ತೆರವು ಗೊಳಿಸುವುದು | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ | ಇಲ್ಲ |
| 8 | ನಗರದಲ್ಲಿನ ರಸ್ತೆಯ ಧೂಳು ಮತ್ತು ಹೂಳನ್ನು ನಿರಂತರವಾಗಿ ತೆರವುಗೊಳಿಸುವುದು | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| 9 | ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ಬಸ್ಸುಗಳ ಹೊಗೆ ನಿಯಂತ್ರಣದಲ್ಲಿಡಲು ಮಾಪನ ನಡೆಸುವುದು. | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ | ಇಲ್ಲ | ಹೌದು | ಹೌದು | ಇಲ್ಲ |
| 10 | ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು | ಹೌದು |
| 11 | ನಗರದಲ್ಲಿ ಹಸಿರು ಹೊದಿಕೆ ಹೆಚ್ಚಿಸುವುದು | ಹೌದು | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಹೌದು | ಹೌದು |
| 12 | ನಗರದಲ್ಲಿ ವಾಹನ ನಿಲುಗಡೆ ಸ್ಥಳಗಳನ್ನು ಹೆಚ್ಚಿಸುವುದು | ಹೌದು | ಹೌದು | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ | ಹೌದು | ಹೌದು | ಇಲ್ಲ |

**ಸಂಖ್ಯೆ: ಅಪಜೀ 197 ಇಪಿಸಿ 2021**

(ಆನಂದ್ ಸಿಂಗ್)
ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ
ಪ್ರವಾಸೋದ್ಯಮ ಸಚಿವರು.